# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/15/2015-16 ದಿನಾಂಕ:28.07.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

ವಾದಿ (ಶ್ರೀ/ಶ್ರೀಮತಿ)

ಬಿ ಶಿವಪ್ಪ ತಂದೆ ಲೇಟ್ ತಿಂದಪ್ಪ
ಉಪನಾಯಕನಹಳ್ಳಿ ಗ್ರಾಮ ಅಂಕಸಮುದ್ರ ಅಂಚೆ
ಹಬೊ ಹಳ್ಳಿ ತಾಲೂಕು

ಪ್ರತಿವಾದಿ (ಶ್ರೀ/ಶ್ರೀಮತಿ)

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಮರಬ್ಬಿಹಾಳು | 66/ಎ3 & 403/ಎ | 2.14 & 11.80 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಮರಬ್ಬಿಹಾಳು ಗ್ರಾಮದ ಸ.ನಂ. 66/ಎ3 ಮತ್ತು 403/ಎ(ಪೈಕಿ) ವಿಸ್ತೀರ್ಣ ಕ್ರಮವಾಗಿ 2.14 ಮತ್ತು 11.80 (ಪೈಕಿ) ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್3/2015-16 ರಲ್ಲಿ ಮನವಿದಾರರು ಸಂಬಂಧಿಸಿದ ಶುಲ್ಕವನ್ನು ಪಾವತಿಸದೇ ಇರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:08.10.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನುಗಳು ಮೂಲತಃ ಬೊಮ್ಮಸಮುದ್ರದ ಬಸಮ್ಮ ಗಂಡ ತಿಂದಪ್ಪ ಇವರ ಆಸ್ತಿಗಳಾಗಿದ್ದು ಸದರಿಯವರು ದಿನಾಂಕ:11.11.2002 ರಂದು ಮರಣ ಹೊಂದಿರುವುದರಿಂದ ಹಾಗೂ ಸದರಿಯವರ ಗಂಡನಾದ ತಿಂದಪ್ಪ ಇವರು ಮರಣ ಹೊಂದಿದ್ದು ಸದರಿಯವರಿಗೆ ಹುಲಿಗೆಮ್ಮ ಮತ್ತು ಶಿವಪ್ಪ ಎಂಬ ಇಬ್ಬರು ಮಕ್ಕಳಿದ್ದು ಈ ಪೈಕಿ ಹುಲಿಗೆಮ್ಮ ಇವರು ವ್ಯಾಜ್ಯದ ಜಮೀನುಗಳ ಪೈಕಿ ತನ್ನ ಭಾಗಕ್ಕೆ ಬರುವ ಆಸ್ತಿಯನ್ನು ವಾದಿಗಳಿಗೆ ಬಿಟ್ಟು ಕೊಟ್ಟಿರುವುದಾಗಿ ಲಿಖಿತ ರೂಪದಲ್ಲಿ ಬರೆದುಕೊಟ್ಟಿರುವುದಾಗಿ ತಿಳಿಸುತ್ತಾ ಪ್ರಸ್ತುತ ಜಮೀನನ್ನು ಪೋತಿ ವಾರಸತ್ವದ ಪ್ರಕಾರ ತನ್ನ ಹೆಸರಿಗೆ ಖಾತೆ ಮಾಡುವಂತೆ ಕೋರಿರುತ್ತಾರೆ.

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಹಕ್ಕುಬದಲಾವಣೆಗೆ ಸಂಬಂಧಿಸಿದ ಶುಲ್ಕವನ್ನು ಪಾವತಿಸಿರುವುದಿಲ್ಲವೆಂದು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ವಿಚಾರಣೆಗೆ ವಾದಿಗಳು ಸತತವಾಗಿ ಗೈರು ಹಾಜರಿದ್ದು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿನ ಪಟ್ಟಾದಾರರ ಗಂಡನಾದ ತಿಂದಪ್ಪ ಇವರು ಮರಣಹೊಂದಿರುವುದಾಗಿ ತಿಳಿಸಿದ್ದು ಸದರಿಯವರ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿರುವುದಿಲ್ಲ, ಆದ್ದರಿಂದ ವಾದಿಗಳು ಹಕ್ಕುಬದಲಾವಣೆಗೆ ಅವಶ್ಯ ದಾಖಲೆಗಳೊಂದಿಗೆ ಮತ್ತೊಮ್ಮೆ ಮನವಿಯನ್ನು ಸಲ್ಲಿಸುವಂತೆ ಸೂಚಿಸುತ್ತಾ ಹಾಗೂ ಪ್ರಕರಣಕ್ಕೆ ಅವಶ್ಯವಾದ ದಾಖಲೆಗಳ ಕೊರತೆಯಿಂದಾಗಿ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಮರಬ್ಬಿಹಾಳು ಗ್ರಾಮದ ಸ.ನಂ. 66/ಎ3 ಮತ್ತು 403/ಎ(ಪೈಕಿ) ವಿಸ್ತೀರ್ಣ ಕ್ರಮವಾಗಿ 2.14 ಮತ್ತು 11.80 (ಪೈಕಿ) ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ವಾದಿಗಳು ಪೋತಿ ವಾರಸತ್ವದ ಪ್ರಕಾರ ಅವಶ್ಯ ದಾಖಲೆಗಳೊಂದಿಗೆ ಮತ್ತೊಮ್ಮೆ ಮನವಿ ಸಲ್ಲಿಸುವಂತೆ ಸೂಚಿಸಿ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.